## ಕಥಾಪ್ರಭ

# ಮನೆ ಬಿಟ್ಟು ಹೋದ ಮಗ



(ಕತೆಗಳೆಂದರೆ ಯಾರಿಗೆ ತಾನೆ ಇಷ್ಟವಿಲ್ಲ? ಆದರೆ ಮಕ್ಕಳಿಗಷ್ಟೆ ಕತೆಗಳೇ. ದೊಡ್ಡವರಿಗೆ ಬೇಡವೆ? ವಿಶ್ವದ ವಿವಿಧ ಧಾರ್ಮಿಕ ಸಂಪ್ರದಾಯಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಭಕ್ತಿ–ಜ್ಞಾನ–ವೈರಾಗ್ಯ ಪ್ರಬೋಧಕವಾದ ನೂರಾರು ಕತೆಗಳಿವೆ. ಅವುಗಳು ಮನಕ್ಕೆ ಮುದಕೊಡುವುದಲ್ಲದೆ, ಆಧ್ಯಾತ್ಮಿಕ ಸಂಸ್ಕಾರವನ್ನೂ ನಮಗೆ ಉಂಟುಮಾಡುವವು. ಅವುಗಳಲ್ಲಿ ರತ್ನಪ್ರಾಯವಾದುವುಗಳನ್ನು ನಮ್ಮ ಓದುಗರಿಗೆ ಈ ತಿಂಗಳಿನಿಂದ ನೀಡುತ್ತಿದ್ದೇವೆ. ಇವುಗಳನ್ನು ಓದಿರಿ, ನಲಿಯಿರಿ, ಇವುಗಳಿಂದ ಜೀವನದ ಪಾಠಗಳನ್ನು ಕಲಿಯಿರಿ ಎನ್ನುವುದೇ ನಿಮ್ಮಲ್ಲಿ ನಮ್ಮ ಪ್ರಾರ್ಥನೆ. ಈ ತಿಂಗಳಿನದು ಬೈಬಲ್ಲಿನಲ್ಲಿ ಏಸುಕ್ರಿಸ್ತ ಹೇಳಿದ ಒಂದು ಕತೆ. –ಸಂ.)

ಒಬ್ಬ ವ್ಯಕ್ತಿಗೆ ಇಬ್ಬರು ಗಂಡುಮಕ್ಕಳಿದ್ದರು. ಕಿರಿಯ ಮಗನು 'ನಿನ್ನ ಆಸ್ತಿಯಲ್ಲಿ ನನಗೆ ಬರಬೇಕಾದ ಪಾಲನ್ನು ಕೊಡು' ಎಂದು ತಂದೆಯನ್ನು ಕೇಳಿದನು. ಆದ್ದರಿಂದ ತಂದೆಯು ಇಬ್ಬರು ಗಂಡುಮಕ್ಕಳಿಗೂ ತನ್ನ ಐಶ್ವರ್ಯವನ್ನು ಹಂಚಿಕೊಟ್ಟನು. ಆಗ ಕಿರಿಮಗನು ತನಗೆ ದೊರೆತ ಪಾಲನ್ನೆಲ್ಲ ಕೂಡಿಸಿಕೊಂಡು ದೂರದೇಶಕ್ಕೆ ಪ್ರಯಾಣ ಮಾಡಿದನು. ಅಲ್ಲಿ ಅವನು ಮೂರ್ಖನಂತೆ ತನ್ನ ಹಣವನ್ನೆಲ್ಲಾ ಹಾಳುಮಾಡಿಕೊಂಡನು. ತನ್ನಲ್ಲಿದ್ದದ್ದನ್ನೆಲ್ಲಾ ಖರ್ಚು ಮಾಡಿದನು. ಸ್ವಲ್ಪ ಕಾಲದ ನಂತರ, ಆ ದೇಶದಲ್ಲಿ ಕ್ಷಾಮ ಉಂಟಾಯಿತು. ಅಲ್ಲಿ ಮಳೆ ಬೀಳಲಿಲ್ಲ. ಆ ದೇಶದ ಯಾವ ಭಾಗದಲ್ಲಿಯೂ ಸಾಕಷ್ಟು ಆಹಾರವಿರಲಿಲ್ಲವಾದ್ದರಿಂದ ಕಿರಿಮಗನು ಬಹಳ ಹಸಿವೆಯಿಂದ ಬಳಲುತ್ತಿದ್ದನು. ಅವನಿಗೆ ಹಣದ ಅಗತ್ಯವೂ ಇತ್ತು. ಆದ್ದರಿಂದ ಅವನು ಆ ದೇಶದ ಶ್ರೀಮಂತನೊಬ್ಬನ ಬಳಿ ಕೂಲಿ ಕೆಲಸಕ್ಕೆ ಸೇರಿಕೊಂಡನು.

ಆ ಶ್ರೀಮಂತನು ಇವನನ್ನು ಹಂದಿ ಮೇಯಿಸುವುದಕ್ಕಾಗಿ ಹೊಲಕ್ಕೆ ಕಳುಹಿಸಿದನು. ಆಗ ಅವನಿಗೆ ಬಹಳ ಹಸಿವೆಯಾಗಿತ್ತು. ಆದ್ದರಿಂದ ಹಂದಿಗಳು ತಿನ್ನುತ್ತಿದ್ದ ಗೆಡ್ಡೆಗಳನ್ನೇ ತಿನ್ನಲು ಹಂಬಲಿಸಿದನು. ಆದರೆ ಅದನ್ನೂ ಅವನಿಗೆ ಯಾರೂ ಕೊಡಲಿಲ್ಲ. ಆಗ ಅವನಿಗೆ ತಾನು ಮಾಡಿದ ಕೆಲಸ ದಡ್ಡತನದ್ದು ಎಂದು ಅರಿವಾಯಿತು. ಅವನು ಹೀಗೆ ಅಂದುಕೊಂಡನು: "ನನ್ನ ತಂದೆಯ ಸೇವಕರಿಗೆ ಕೂಡ ನನ್ನ ದುರವಸ್ಥೆ ಇಲ್ಲ. ಅವರಿಗೆ ಬೇಕಾದಷ್ಟು ಆಹಾರ ಸಿಗುತ್ತದೆ. ನಾನೀಗ ಇಲ್ಲಿಂದ ನನ್ನ ತಂದೆಯ ಬಳಿಗೆ ಹೊರಟು ಹೋಗುತ್ತೇನೆ. ನಾನು ನನ್ನ ತಂದೆಗೆ, 'ಅಪ್ಪಾ, ನಾನು ದೇವರ ವಿರುದ್ಧವಾಗಿ ತಪ್ಪು ಮಾಡಿದ್ದೇನೆ. ನೀನು ನನ್ನನ್ನು ನಿನ್ನ ಸೇವಕರಲ್ಲಿ ಒಬ್ಬನನ್ನಾಗಿ ಸೇರಿಸಿಕೊ' ಎಂದು ಹೇಳುತ್ತೇನೆ." ಹೀಗೆ ಯೋಚಿಸಿಕೊಂಡು, ಅವನು ಅಲ್ಲಿಂದ ಹೊರಟು ತನ್ನ ತಂದೆಯ ಬಳಿಗೆ ಹೋದನು.

ಮಗನು ಇನ್ನೂ ಬಹುದೂರದಲ್ಲಿ ಬರುತ್ತಿರುವಾಗಲೇ ತಂದೆಯು ಅವನನ್ನು ಗುರುತಿಸಿ ಕನಿಕರದಿಂದ ಅವನ ಬಳಿಗೆ ಓಡಿಬಂದು ಅವನನ್ನು ಅಪ್ಪಿಕೊಂಡು ಮುದ್ದಿಟ್ಟನು. ಮಗನು ತನ್ನ ತಂದೆಗೆ "ಅಪ್ಪಾ, ನಾನು ದೇವರಿಗೆ ವಿರೋಧವಾಗಿ ಪಾಪ ಮಾಡಿದ್ದೇನೆ; ಮತ್ತು ನಿನಗೆ ವಿರೋಧವಾಗಿ ತಪ್ಪು ಮಾಡಿದ್ದೇನೆ. ನಿನ್ನ ಮಗನೆಂದು ಕರೆಸಿಕೊಳ್ಳುವುದಕ್ಕೆ ನಾನು ಯೋಗ್ಯನಲ್ಲ" ಎಂದು ಹೇಳಿದನು. ಆದರೆ ತಂದೆಯು ತನ್ನ ಸೇವಕರಿಗೆ, "ತ್ವರೆ ಮಾಡಿರಿ! ಉತ್ತಮವಾದ ಉಡುಪುಗಳನ್ನು ತಂದು ಇವನಿಗೆ ತೊಡಿಸಿರಿ. ಇವನ ಬೆರಳಿಗೆ ಉಂಗುರವನ್ನು ಹಾಕಿರಿ. ಪಾದಗಳಿಗೆ ಒಳ್ಳೆಯ ಪಾದರಕ್ಷೆಗಳನ್ನು ತೊಡಿಸಿರಿ. ವಿಶೇಷ ಔತಣವನ್ನು ಏರ್ಪಡಿಸಿ ಉಲ್ಲಾಸಪಡೋಣ. ನನ್ನ ಮಗನು ಸತ್ತುಹೋಗಿದ್ದನು, ಈಗ ಮತ್ತೆ ಬದುಕಿ ಬಂದಿದ್ದಾನೆ! ಇವನು ತಪ್ಪಿಸಿಕೊಂಡು ಹೋಗಿದ್ದನು, ಈಗ ಮತ್ತೆ ಸಿಕ್ಕಿದ್ದಾನೆ!" ಎಂದು ಹೇಳಿದನು. ಈ ಮಾತುಗಳನ್ನು ಕೇಳಿ ಅವರೆಲ್ಲರೂ ಸಂತೋಷಪಟ್ಟರು.

ಈ ಸಮಯದಲ್ಲಿ ಹಿರಿಯ ಮಗನು ಹೊಲದಲ್ಲಿದ್ದನು. ಅವನು ಮನೆಗೆ ಬರುತ್ತಿದ್ದಾಗ ವಾದ್ಯಗೋಷ್ಠಿಯ ಮತ್ತು ನೃತ್ಯದ ಶಬ್ದವನ್ನು ಕೇಳಿದನು. ಆಗ ಅವನು ತನ್ನ ಸೇವಕರಲ್ಲಿ ಒಬ್ಬನನ್ನು ಕರೆದು, 'ಇದೇನು?' ಎಂದು ವಿಚಾರಿಸಿದನು ಆ ಸೇವಕನು, 'ನಿನ್ನ ತಮ್ಮನು ಮರಳಿ ಬಂದಿದ್ದಾನೆ. ನಿನ್ನ ತಮ್ಮನು ಮನೆಗೆ ಸುರಕ್ಷಿತವಾಗಿ ಬಂದದ್ದಕ್ಕಾಗಿ ನಿನ್ನ ತಂದೆಯು ಸಂತೋಷಗೊಂಡು, ವಿಶೇಷ ಭೋಜನವನ್ನು ಆಯೋಜಿಸಿದ್ದಾನೆ.' ಎಂದು ಹೇಳಿದನು.

ಆದನ್ನು ಕೇಳಿ ಹಿರಿಯ ಮಗನು ಕೋಪಗೊಂಡು ಔತಣಕ್ಕೆ ಹೋಗಲಿಲ್ಲ. ಆಗ ಅವನ ತಂದೆ ಮನೆಯ ಹೊರಗೆ ಬಂದು ಅವನನ್ನು ಒಳಗೆ ಕರೆದನು. ಹಿರಿಯ ಮಗನು ತಂದೆಗೆ ಹೀಗೆಂದನು:

"ನೀವು ನಿಮ್ಮ ಸಹೋದರನನ್ನಾಗಲಿ ಸಹೋದರಿಯನ್ನಾಗಲಿ ನಿಜವಾಗಿಯೂ ಕ್ಷಮಿಸಬೇಕು. ಇಲ್ಲದಿದ್ದರೆ ಪರಲೋಕದ ನನ್ನ ತಂದೆಯೂ ನಿಮ್ಮನ್ನು ಕ್ಷಮಿಸುವುದಿಲ್ಲ." – ಏಸುಕ್ರಿಸ್ತ

'ನಾನು ಗುಲಾಮನಂತೆ ನಿನಗೆ ಅನೇಕ ವರ್ಷಗಳವರೆಗೆ ಸೇವೆ ಮಾಡಿದೆನು! ನಾನು ಯಾವಾಗಲೂ ನಿನ್ನ ಅಪ್ಪಣೆಗಳಿಗೆ ವಿಧೇಯನಾಗಿದ್ದೆನು. ಆದರೆ ನೀನು ನನಗಾಗಿ ಮತ್ತು ನನ್ನ ಸ್ನೇಹಿತರಿಗಾಗಿ ಎಂದೂ ಒಂದಾದರೂ ಔತಣಕೂಟವನ್ನು ಏರ್ಪಡಿಸಲಿಲ್ಲ. ಆದರೆ ನಿನ್ನ ಕಿರಿಯ ಮಗನು ನಿನ್ನ ಎಲ್ಲ ಹಣವನ್ನು ವ್ಯಭಿಚಾರದಲ್ಲಿ ಖರ್ಚು ಮಾಡಿ ಮನೆಗೆ ಹಿಂತಿರುಗಿ ಬಂದಾಗ ನೀನು ಅವನಿಗಾಗಿ ದೊಡ್ಡ ಔತಣಕೂಟವನ್ನು ಏರ್ಪಡಿಸಿರುವೆ!'

ಆದರೆ ತಂದೆಯು ಅವನಿಗೆ, ಹೀಗೆಂದನು, **'ಮಗನೇ, ನೀನು ಯಾವಾಗಲೂ ನನ್ನೊಂದಿಗೆ ಇರುತ್ತೀ. ನನಗಿಲ್ಲಿರುವುದೆಲ್ಲಾ ನಿನ್ನದೇ.** ಆದರೆ, ಈ ಸಂದರ್ಭದಲ್ಲಿ ನಾವು ಸಂತೋಷ ಪಡಬೇಕು, ಉಲ್ಲಾಸಪಡಬೇಕು, ಏಕೆಂದರೆ ನಿನ್ನ ತಮ್ಮನು ಸತ್ತು ಹೋಗಿದ್ದನು, ಈಗ ಮತ್ತೆ ಬದುಕಿದ್ದಾನೆ. ಅವನು ಕಳೆದು ಹೋಗಿದ್ದನು, ಈಗ ಮತ್ತೆ ಸಿಕ್ಕಿದ್ದಾನೆ' ▪

## ವಿನೋದದಿಂದ

### ವೇದಾಂತ

ಒಂದು ಕಾಲೇಜು ಪರೀಕ್ಷೆಯ ಉತ್ತರ ಪತ್ರಿಕೆಯಲ್ಲಿ, ಯಾರ ಸಹಾಯವನ್ನೂ ತಗೆದುಕೊಳ್ಳದೆ ಸ್ವತಃ ಪ್ರಶ್ನೆಗಳಿಗೆ ಉತ್ತರಿಸಿದ್ದೇವೆ ಎಂಬ ಹೇಳಿಕೆಗೆ ವಿದ್ಯಾರ್ಥಿಗಳು ಸಹಿ ಮಾಡಬೇಕಾಗಿತ್ತು. ಒಬ್ಬ ವಿದ್ಯಾರ್ಥಿ ಯೋಚಿಸಿದ: "ನಾನು ದೇವರ ಸಹಾಯ ಪಡೆದುಕೊಂಡಿದ್ದೀನಲ್ಲ, ಹೇಗೆ ಸಹಿ ಮಾಡಲಿ?" ಎಂದು. ಅದನ್ನು ತನ್ನ ಪ್ರೊಫೆಸರ್ ಬಳಿ ಹೇಳಿಯೂ ಬಿಟ್ಟ. ಪ್ರೊಫೆಸರ್ ಅವನ ಉತ್ತರಪತ್ರಿಕೆಯನ್ನು ಕೈಯಲ್ಲಿ ತೆಗೆದುಕೊಂಡು ಸ್ವಲ್ಪ ಓದಿ ನೋಡಿದರು. ಆಗ ಅವರು ಹೇಳಿದ್ದು: **" ನೀನೀಗ ಆ ಹೇಳಿಕೆಗೆ ಅವಶ್ಯವಾಗಿ ಸಹಿ ಮಾಡಬಹುದು. ಇದರಲ್ಲಂತೂ ದೇವರು ನಿನಗೆ ಖಂಡಿತ ಸಹಾಯ ಮಾಡಿಲ್ಲ."**

**ದೇವರು ಕುರಿ ಕಾಯುವವನಂತೆ ನಮ್ಮನ್ನು ಕಾಪಾಡುವುದಿಲ್ಲ; ಕಾಪಾಡುವುದಿದ್ದರೆ ಒಳ್ಳೆಯ ಬುದ್ಧಿಯನ್ನು ಕೊಡುತ್ತಾನೆ ಎಂದು ಸುಭಾಷಿತವೊಂದು ಸಾರುತ್ತದೆ. ಪ್ರತಿಯೊಂದಕ್ಕೂ ದೇವರ ಸಹಾಯವನ್ನು ಕೇಳುವ ಬದಲು, ದೇವರು ಕೊಟ್ಟ ಬುದ್ಧಿಯನ್ನು ಸರಿಯಾಗಿ ಉಪಯೋಗಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವುದೇ ನಮ್ಮ ಮುಂದಿರುವ ಕರ್ತವ್ಯ.**

✓ ✓ ✓

ಹುಚ್ಚಾಸ್ಪತ್ರೆಗೆ ಭೇಟಿಕೊಟ್ಟ ಒಬ್ಬ ಅದನ್ನು ಸೇರಲು ಅರ್ಹತೆ ಏನು ಎಂದು ವೈದ್ಯರನ್ನು ಕೇಳಿದ. "ನಾವು ತೊಟ್ಟಿಯಲ್ಲಿ ನೀರು ತುಂಬಿ, ಅಭ್ಯರ್ಥಿಗೆ ಒಂದು ಚಮಚ, ಬಕೆಟ್ ಮತ್ತು ಲೋಟ ಕೊಟ್ಟು ತೊಟ್ಟಿಯ ನೀರು ಖಾಲಿ ಮಾಡಲು ಹೇಳುತ್ತೇವೆ ಎಂದರು ವೈದ್ಯರು. "ಆಹಾ! ಈಗ ಗೊತ್ತಾಯಿತು! ತಲೆ ಸರಿ ಇರುವವನು ಬಕೆಟ್ ಉಪಯೋಗಿಸುತ್ತಾನೆ, ಅಲ್ಲವೆ? ಏಕೆಂದರೆ, ಅದು ಚಮಚ ಮತ್ತು ಲೋಟಗಳಿಂತ ದೊಡ್ಡದು" ಎಂದ, ಬಂದಿದ್ದ ವ್ಯಕ್ತಿ.

**"ಅಯ್ಯೋ, ತಲೆ ಸರಿ ಇರುವವನು ತೊಟ್ಟಿಯ ಕೆಳಗಿರುವ ಬಿರಡೆ ಕಳಚುತ್ತಾನೆ. ನಿನಗೆ ಕಿಟಕಿಯ ಪಕ್ಕದಲ್ಲಿರುವ ಹಾಸಿಗೆ ಕೊಡಲೇನು?"** ಎಂದು ಅವನನ್ನೇ ದುರುಗುಟ್ಟಿಕೊಂಡು ನೋಡುತ್ತ ಹೇಳಿದರು ವೈದ್ಯರು.

**ತಮ್ಮ ಮನೆಯ ಕಾವಲಿಯೇ ತೂತಾಗಿರುವಾಗ ಪಕ್ಕದ ಮನೆಯ ದೋಸೆ ತೂತು ಎನ್ನುವವರು ಹಲವರು. ಇಂತಹ ಪ್ರವೃತ್ತಿ ನಮ್ಮ ಬಗ್ಗೆ ನಾವು ಸರಿಯಾದ ದೃಷ್ಟಿಕೋನ ಹೊಂದುವುದನ್ನು ತಪ್ಪಿಸಿ, ಭ್ರಮಾಲೋಕಕ್ಕೆ ಒಯ್ಯುತ್ತದೆ; ಅಹಂಕಾರಿಗಳನ್ನಾಗಿ ಮಾಡುತ್ತದೆ. ವೇದಾಂತದಲ್ಲಿ ಇದನ್ನೇ *ಮೋಹ* ಎಂದು ಕರೆಯುತ್ತಾರೆ. ಅದರ ನಿವಾರಣೆಯೇ ಜ್ಞಾನಕ್ಕೆ ದಾರಿ.**

✓ ✓ ✓

**'ವಿಕ್ಷೇಪ' ಎಂದರೆ ಇಲ್ಲದ್ದು ಕಾಣಬರುವುದು. ಪರಮಾತ್ಮ ವಸ್ತುವಿನಲ್ಲಿ ಪ್ರಪಂಚವನ್ನು ನೋಡುವುದೇ ಮೊದಲ ತಪ್ಪು ಗ್ರಹಿಕೆ. ಇದೇ ಸರಣಿ ರೂಪದಲ್ಲಿ ಬೆಳೆಯುತ್ತ ಹೋಗಿ, ರಾಗ, ದ್ವೇಷ, ಭಯ, ವಿಸ್ಮೃತಿ ಮುಂತಾದ ವಿಕಾರಗಳನ್ನು ಮನಸ್ಸಿನಲ್ಲಿ ಸೃಷ್ಟಿಸುತ್ತ ಹೋಗುತ್ತದೆ. ಅವು ಇನ್ನೂ ಸಂಕೀರ್ಣವಾದ ಅನೇಕ ಭ್ರಮೆಗಳು, ಕಲ್ಪನೆಗಳು, ಸಂದೇಹಗಳನ್ನು ಹುಟ್ಟುಹಾಕಿ, ಜೀವನವನ್ನು ದುಃಖಮಯವನ್ನಾಗಿ ಮಾಡುತ್ತವೆ. ಅದು ಹೇಗೆ ಆಗುತ್ತದೆ ಅನ್ನುವುದಕ್ಕೆ ಇಲ್ಲೊಂದು ಹಾಸ್ಯಪ್ರಸಂಗ.**

ಒಮ್ಮೆ ಉತ್ತರದ ಕಡೆಯಿಂದ ಬಂದೊಬ್ಬ ಪ್ರಯಾಣಿಕ ತನ್ನ ಪ್ರದೇಶದಲ್ಲಿ ತುಂಬಾ ಚಳಿ ಎಂದು ಜಂಭ ಕೊಚ್ಚಿಕೊಂಡ.

"ಚಳಿಗಾಲದ ಮಧ್ಯದಲ್ಲಿ ಎಷ್ಟು ಚಳಿ ಇರುತ್ತದೆ ಎಂದರೆ ನಮಗೆ ಊಟ ಮಾಡಲೂ ಸಾಧ್ಯವಾಗದು. ಏಕೆಂದರೆ ನಾವು ಊಟ ಮಾಡುವಾಗ ಉಪಯೋಗಿಸುವ ಇಕ್ಕಳ ಕಡ್ಡಿಗಳು ಮೇಜಿಗೆ ಅಂಟಿಕೊಂಡು ಬಿಡುತ್ತವೆ. ಅವು ಹೆಪ್ಪುಗಟ್ಟಿ ಬಿಡುತ್ತವೆ. ಗೊತ್ತಾಯಿತೆ?"

"ಅಬ್ಬಾ, ಅದ್ಭುತ"

"ಇನ್ನೊಬ್ಬರು ಹೇಳುವುದನ್ನು ಕೇಳುವದಕ್ಕೂ ಆಗುವುದಿಲ್ಲ. ನಾವು ಆಡುವ ಮಾತುಗಳು ನಮ್ಮ ಕಿವಿಗೆ ಬೀಳುವ ಮೊದಲೇ ಗೋಡೆಗಳ ಮೇಲೆ ಹೆಪ್ಪುಗಟ್ಟಿ ಬಿಡುತ್ತವೆ."

"ಅಬ್ಬಬ್ಬಾ, ಹಾಗಾದರೆ ನಿಮ್ಮಲ್ಲಿ ಬೇಸಿಗೆ ಶುರುವಾದಾಗ ತುಂಬಾ ಗದ್ದಲವಾಗುತ್ತದೆ. ಏಕೆಂದರೆ ಆಡಿದ ಮಾತುಗಳೆಲ್ಲಾ ಒಟ್ಟಿಗೆ ಕರಗಿ ನೀರಾಗಿ ಬಿಡುತ್ತವೆ, ಅಲ್ಲವೇ?" (ಜಪಾನಿನ ಕತೆ)

ಹಿಂದೂಧರ್ಮದವರು 'ಮತ್ತೆ ಮತ್ತೆ ಈ ಶುಭದಿನ ಮರುಕಳಿಸಲಿ' *(Happy returns of the day)* ಎಂಬ ಹುಟ್ಟುಹಬ್ಬದ ಶುಭಾಶಯವನ್ನು ಏಕೆ ಕೋರುವುದಿಲ್ಲ?
***ಮತ್ತೆ ಮತ್ತೆ ಹುಟ್ಟಿಬರುವುದು ದುಃಖವೆಂದು ಅವರಿಗೆ ತಿಳಿದಿದೆ.***